## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯು ಆಯುಕ್ತರ ಕಛೇರಿ, ಬೆಂಗಳೂರು

ಸಂಖ್ಯೆ: ಸಿ೮(ಅ)/ಶಾ.ಶಿ.ಅ/ಅಧಿಕ ವಿಭಾಗ/೨೦೦೦-೦೧ ದಿ: ೩೧-೦೩-೨೦೦೧

**ಸುತ್ತೋಲೆ**

ವಿಷಯ : ಖಾಸಗಿ ಅನುದಾನ ರಹಿತ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಇಡಿ ೧೯/ಎಸ್‌ಇಎಸ್ ೯೮ ಬೆಂಗಳೂರು, ದಿನಾಂಕ: ೧೯-೬-೧೯೯೯.

*******

ಖಾಸಗಿ ಶಾಶ್ವತ ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಅನುಮತಿ ನೀಡುವ ಬಗೆಗಿನ ಪ್ರಸ್ತಾವನೆಗಳನ್ನು ಇನ್ನು ಮುಂದೆ ಈ ಕಛೇರಿಗೆ ಸಲ್ಲಿಸಬಾರದೆಂದು, ಪ್ರತಿ ಶಾಲೆಯ ಆ ಪ್ರದೇಶದ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿಗೆ ಅನುಗುಣವಾಗಿ ಹಾಗೂ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಮೂಲಭೂತ ಸೌಲಭ್ಯಗಳನ್ನು ಆಡಳಿತ ಮಂಡಳಿಯವರು ಒದಗಿಸಿದಲ್ಲಿ ಸರ್ಕಾರಿ ಆದೇಶ ದಿ: ೧೯-೬-೯೯ ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ ಅಂತಹ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಶಾಶ್ವತ ಅನುದಾನರಹಿತ ಷರತ್ತಿನ ಮೇಲೆ ಪರಿಶೀಲಿಸಿ ಅನುಮತಿ ನೀಡಲು ಜಿಲ್ಲಾ ಉಪನಿರ್ದೇಶಕರಿಗೆ ಸೂಚಿಸಲಾಗಿದೆ.

ಷರತ್ತುಗಳು

೧) ಇಂತಹ ಮಂಜೂರಾತಿಯು ಶಾಶ್ವತ ಅನುದಾನರಹಿತವಾಗಿರತಕ್ಕದ್ದು, ಆಡಳಿತ ಮಂಡಳಿಗಳು ಮುಂದೆ ಯಾವುದೇ ಸಂದರ್ಭದಲ್ಲಿ ಅನುದಾನವನ್ನು ಕೇಳಿ ಬೇಡಿಕೆಯನ್ನು ಸಲ್ಲಿಸತಕ್ಕದ್ದಲ್ಲ.

೨) ಇಂತಹ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯದ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಶಾಲೆಗಳ ಬೆಳವಣಿಗೆ ಹಾಗೂ ಅಭಿವೃದ್ದಿಗೆ ಧಕ್ಕೆ ಉಂಟಾಗಬಾರದು. ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಶಾಲೆಗಳಿಂದ ಅಥವಾ ಪೋಷಕರಿಂದ ಆಕ್ಷೇಪಗಳು ಬಂದಲ್ಲಿ ಅವುಗಳನ್ನು ಸಹ ಪರಿಗಣಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳತಕ್ಕದ್ದು.

೩) ಸಂಬಂಧಪಟ್ಟ ಆಡಳಿತ ಮಂಡಳಿಗಳು ಕರ್ನಾಟಕ ಶಿಕ್ಷಣ ಕಾಯಿದೆ ೧೯೮೩ರ ಅಧಿನಿಯಮ ಹಾಗೂ ನಿಯಮಗಳ ಉಪಬಂಧಗಳ ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪೂರೈಸಿರಬೇಕು.

೪) ತರಬೇತಿ ಹೊಂದಿದ ಅರ್ಹ ವಿದ್ಯಾರ್ಹತೆಯುಳ್ಳ ಶಿಕ್ಷಕರುಗಳನ್ನು ನೇಮಿಸಿಕೊಳ್ಳಬೇಕು.

೫) ಸಾಕಷ್ಟು ಕೊಠಡಿಗಳು, ಪೀಠೋಪಕರಣ ಮತ್ತು ಪಾಠೋಪಕರಣಗಳನ್ನು ಆಡಳಿತ ಮಂಡಳಿ ಒದಗಿಸಿರಬೇಕು.

೬) ವಿದ್ಯಾರ್ಥಿಗಳ ಸಂಖ್ಯೆ ನಿಯಮಾನುಸಾರ ನಿರ್ದಿಷ್ಟ ಸಂಖ್ಯೆಯಲ್ಲಿರಬೇಕು.

೭) ಮಂಜೂರಾತಿ ನೀಡಿರುವ ಮಾಧ್ಯಮದಲ್ಲಿಯೇ ತರಗತಿಯನ್ನು ತೆರೆಯತಕ್ಕದ್ದು.

೮) ನಿಯಾಮಾವಳಿ ಪ್ರಕಾರ ಫೀ, ಶುಲ್ಕವನ್ನು ವಸೂಲು ಮಾಡತಕ್ಕದ್ದು.

(ಜೆ.ಎಲ್. ಹೆಗಡೆ)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)